**<u>ದಿನಾಂಕಃ 28-07-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಶ್ರೀ ಸಿ.ಪಿ.ಡಿ ವಾದಿ ಪರ ವಕೀಲರಿಂದ ಃ</u>**

ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸಲ್ಲಿಸಿದ ಓ ಎಸ್ 122/2008 ಪ್ರಕರಣವನ್ನು ನಾವು ಹಿಂದಕ್ಕೆ ಪಡೆದಿರುತ್ತೇವೆ. ಸದರಿ ಆದೇಶದ ವಿರುದ್ಧ ಈ ದಾವೆಯ ವಾದಿಯರು ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನಿಜ. ಸದರಿ ಮೇಲ್ಮನವಿ ಪುರಸ್ಕತಗೊಂಡ ಆದೇಶ ರದ್ದಾಗಿದೆ ಎಂದರೆ ನನಗೆ ಗೋತ್ತಿಲ್ಲ. ಈಗ ಓ ಎಸ್ 122/2008 ಚಾಲ್ತಿಯಲ್ಲಿದೆ ಎಂದರೆ ನಿಜ. ವಿ.ಪಿ.ಸಿ ನಂ. 33 ಗೆ ಸದರಿ ಪ್ರಕರಣ ದಾಖಲಾಗಿತ್ತು ಎಂದರೆ ನಿಜ. ಹೀಗಾಗಿ ನಾವು ಸಲ್ಲಿಸಿದ ಓ ಎಸ್ 167/2018 ಕ್ಕೆ ಕಾನೂನಿನಲ್ಲಿ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ಹೀಗಾಗಿ ನಿಡಿ-3 ರಿಂದ 8 ದಾಖಲೆಗಳಿಗೆ ಯಾವುದೇ ಮಾನ್ಯತೆ ಇಲ್ಲ ಎಂದರೆ ಸರಿಯಲ್ಲ. ದಿಃ 08.06.2021 ರಂದು ಮೇಲ್ಮನವಿ ಪುರಸ್ಕತ ಗೊಂಡಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು ನನ ಅಜ್ಜನನ್ನು ನೋಡಿರುವುದಿಲ್ಲ. ನಮ್ಮ ವಕೀಲರಿಗೆ ಕುಟುಂಬದ ವಂಶಾವಳಿ ಬಗ್ಗೆ ಮಾಹಿತಿ ಕೊಟ್ಟಿರುತ್ತೇನೆ. ನಾವು ಮತ್ತು ವಾದಿ ದೊಡ್ಡ ಕರಿಯಪ್ಪನ ವಂಸ್ಥಸ್ತರು. ದೊಡ್ಡ ಕರಿಯಪ್ಪಗೆ ಸಣ್ಣ ಕರಿಯಪ್ಪ ಎಂಬ ತಮ್ಮ ಇದ್ದ ಎಂದರೆ ನಿಜ. ಮಾಯಪ್ಪ ಸಣ್ಣ ಕರಿಯಪ್ಪನ ಮಗ ಎಂದರೆ ನಿಜ. ಮಾಯಪ್ಪನ ಹೆಂಡತಿ ಯಲ್ಲವ್ವ. ಅವರಿಗೆ ಮಕ್ಕಳು ಇರಲಿಲ್ಲ. ಹೀಗಾಗಿ ಕುರುಬರಹಳ್ಳಿ ಗ್ರಾಮದ ಕುರುಬರ ಗುಡ್ಡಪ್ಪ ಎಂಬುವವರನ್ನು ದತ್ತಕ್ಕು ಪಡೆದಿದ್ದರು ಎಂದರೆ ನಿಜ. ಗುಡ್ಡಪ್ಪಗೆ ನಿಂಗಪ್ಪ ಎಂಬ ಅಣ್ಣ ಇದ್ದರು ಎಂದರೆ ನಿಜ. ಆ ನಿಂಗಪ್ಪನಿಗೆ ಪುಟ್ಟವ್ವ ಎಂಬ ಮಗಳಿದ್ದಳು ಎಂದರೆ ನಿಜ. ಅಣ್ಣನ ಮಗಳನ್ನು ಗುಡ್ಡಪ್ಪ ತಂದು ಸಾಕಿದ್ದರು ಎಂದರೆ ಸರಿಯಲ್ಲ. ಗುಡ್ಡಪ್ಪನಿಗೆ ಹೆಂಡತಿ-ಮಕ್ಕಳು ಇರಲಿಲ್ಲ. ಪುಟ್ಟವ್ವನನ್ನು ನನ್ನ ದೊಡ್ಡಪ್ಪನಾದ ಸಣ್ಣಪ್ಪನಿಗೆ ಕೊಟ್ಟು ಮದುವೆ ಮಾಡಿತ್ತು ಎಂದರೆ ನಿಜ. ಆ ಪುಟ್ಟವ್ವನ ಮಗ ಈ ಪ್ರಕರಣದ ವಾದಿ ಕರಿಯಪ್ಪ ಎಂದರೆ ನಿಜ. ನಮ್ಮ ತಂದೆ ಹೆಸರು ಸಿದ್ದಪ್ಪ ಎಂದು ಇರುತ್ತದೆ. ನನ್ನ ತಂದೆ ದಿನಾಂಕಃ 23.12.1971 ಮೃತ

ಪಟ್ಟರು ಎಂದರೆ ನಿಜ. ವಾದಿಯ ತಂದೆ ಸಣ್ಣಪ್ಪ ದಿನಾಂಕಃ 28.07.1956 ರಲ್ಲಿ ಮೃತ ಪಟ್ಟರು ಎಂದರೆ ನಿಜ. ಕರಿಯಪ್ಪ ತನ್ನ ತಂದೆಗೆ ಒಬ್ಬನೇ ಮಗ ಇರುತ್ತಾನೆ.

ಮುತ್ತೂರು ಗ್ರಾಮದ ಸರ್ವೆ ನಂ. 119, ಸರ್ವೆ ನಂ. 94, ಸರ್ವೆ ನಂ. 116, ಮತ್ತು ದೂಳಿಕೊಪ್ಪ ಗ್ರಾಮದ ಸರ್ವೆ ನಂ.33 ರಲ್ಲಿ ಅಲ್ಲದೇ ಮನೆ ಜಾಗ ನಂ.32 ಮತ್ತು 33 ರಲ್ಲಿ ಆಸ್ತಿ ಇದ್ದವು. ಈ ಎಲ್ಲಾ ಆಸ್ತಿಗಳು ನನ ಅಜ್ಜ ದೊಡ್ಡಕರಿಯಪ್ಪನ ಹೆಸರಿನಲ್ಲಿ ಇದ್ದವು ಅಂತಾ ತೋರಿಸಲು ದಾಖಲೆ ಇರುವುದಿಲ್ಲ. ಈ ಎಲಾ ಆಸ್ತಿಗಳು ಸಣ್ಣ ಕರಿಯಪ್ಪನ ಆಸ್ತಿ ಎಂದರೆ ಸರಿಯಲ್ಲ. ಸಣ್ಣ ಕರಿರಯಪ್ಪ ತೀರಿಕೊಂಡ ನಂತರ ಮಾಯಪ್ಪನ ಹೆಸರಿಗೆ ಈ ಆಸ್ತಿಗಳು ಬಂದಿರುತ್ತವೆ ಎಂದರೆ ಅವರ ಪಾಲಿಗೆ ಬಂದವು ಬಂದ್ದಿದವು ಎಂದು ಹೇಳಿರುತ್ತಾರೆ. ಈಆಸ್ತಿಗಳಿಗೆ ನನ್ನ ಅಜ್ಜ ದೊಡ್ಡಕರಯಪ್ಪನಿಗೆ ಯಾವುದೇ ಹಿಸ್ಸಾ ಅಧಿಕಾರ ಇದ್ದಿಲ್ಲ ಎಂದರೆ ಸರಿಯಲ್ಲ.

ಮುಂದುವೆರೆದ ಪಾಟೀ ಸವಾಲುಃ

ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.